# ಬಿದಿರು ನೀನಾರಿಗಲ್ಲದವಳು...

- ಮನುಷ್ಯನ ಹುಟ್ಟಿನಿಂದ ಸಾವಿನವರೆಗೆ ಒಂದಿಲ್ಲೊಂದು ಉಪಯೋಗಕ್ಕೆ ಬರುವ ಬಿದಿರು ಅನಾದಿಕಾಲದಿಂದಲೂ ಬಳಕೆಯಲ್ಲಿರುವ ಸಸ್ಯ.
- ಜಾಗತಿಕವಾಗಿ ಬಿದಿರು ಉಷ್ಣವಲಯದ ಕಾಡುಗಳಲ್ಲಿ ಕಂಡುಬರುವ ಹುಲ್ಲು ಜಾತಿಯ ಸಸ್ಯ. ಸುಮಾರು 1500ಕ್ಕಿಂತಲೂ ಅಧಿಕ ಬಿದಿರಿನ ಪ್ರಭೇದಗಳು ಈ ಭೂಮಿ ಮೇಲಿವೆ.
- ಆಗ್ನೇಯ ಏಷ್ಯಾ ದೇಶಗಳಲ್ಲಿ ಬಿದಿರಿನ ವೈವಿಧ್ಯ ಹೆಚ್ಚು. 40 ದಶಲಕ್ಷ ವರ್ಷಗಳ ಹಿಂದೆ ಚೀನಾ ಭಾಗಗಳಲ್ಲಿ ಬಿದಿರಿನ ಹುಟ್ಟು ಆರಂಭವಾಯಿತೆಂದು ನಂಬಲಾಗಿದೆ. ಅದರಂತೆ ಭಾರತವೂ ಬಿದಿರಿನ ವೈವಿಧ್ಯಕ್ಕೆ ಹೆಸರುವಾಸಿ. ಪ್ರಭೇದಗಳ ಶ್ರೀಮಂತಿಕೆಯಲ್ಲಿ ಚೀನಾದ ನಂತರದ ಸ್ಥಾನ ಭಾರತದ್ದು! 136 ವೈವಿಧ್ಯಮಯ ಬಿದಿರಿನ ಜಾತಿಗಳು ಭಾರತದಲ್ಲಿವೆ ಹಾಗೂ 'ಟುಲ್ಡಾ' ಬಿದಿರು ಭಾರತದಲ್ಲೇ ಉಗಮವಾದದ್ದೆಂದು ಹೇಳಲಾಗಿದೆ.
- ನಮ್ಮ ಈಶಾನ್ಯ ರಾಜ್ಯಗಳು ಬಿದಿರಿನ ತವರೂರು ಎಂದು ಹೇಳಬಹುದು. ಸುಮಾರು 60 ಜಾತಿಯ ಬಿದಿರಿನ ತಳಿಗಳು ಈ ರಾಜ್ಯಗಳಲ್ಲಿ ನೆಲೆನಿಂತಿವೆ. ಇವುಗಳಲ್ಲಿ ಬಹುತೇಕ ಬಿದಿರುಗಳು ಸ್ಥಾನಿಕ ತಳಿಗಳೇ ಆಗಿವೆ. ರ್‍ಹಾ ಬಿದಿರು, ಆಸ್ಪರ್ ಬಿದಿರು (ಸಿಹಿ ಬಿದಿರು), ಜೆಯಿಂಟ್ ಬಿದಿರು (ದಢೂತಿ ಬಿದಿರು), ಓಲಿವರಿ ಬಿದಿರು (ಲಾಠಿ ಬಿದಿರು) ಮುಂತಾದವು ಅನಾದಿ ಕಾಲದಿಂದ ಭಾರತಕ್ಕೆ ವಲಸೆ ಬಂದು ಇಲ್ಲೇ ನೆಲೆನಿಂತಿವೆ.



- ಬಿದಿರು ವಿಶಿಷ್ಟ ಸಸ್ಯ. ಹುಲ್ಲಿನ ಗುಣಲಕ್ಷಣಗಳನ್ನು ಹೊಂದಿದ್ದರೂ ಮರದಂತೆ ಎತ್ತರಕ್ಕೆ ಬೆಳೆಯುವ ಹುಲ್ಲು ಮರ. ಸಸ್ಯ ವರ್ಗಗಳಲ್ಲೇ ಬಿದಿರು ಅತ್ಯಂತ ವೇಗವಾಗಿ ಬೆಳೆಯುವ ಸಸ್ಯ. ಎಲ್ಲ ವಾತಾವರಣಕ್ಕೂ ಹೊಂದಿಕೊಂಡು ಬೆಳೆಯುವ ಈ ಬಿದಿರು ಜೀವನದಲ್ಲಿ ಒಮ್ಮೆ ಮಾತ್ರ ಹೂ ಮತ್ತು ಬೀಜ ಬಿಟ್ಟು ಸಾಯುತ್ತದೆ. ವಿವಿಧ ಪ್ರಭೇದಗಳ ಬಿದಿರುಗಳು 60ರಿಂದ 150 ವರ್ಷಗಳವರೆಗೆ ಬದುಕಬಲ್ಲವು. ಗಳ (ಕಾಂಡ) ಗಳನ್ನು ಕಡಿದರೂ ಪುನಃ ಬೆಳೆಯುವ ಸಾಮರ್ಥ್ಯ ಬಿದಿರಿಗಿದೆ. ಕಟಾವು ಮಾಡಿದರೂ, ವರ್ಷವಿಡೀ ಪುನರುತ್ಪತ್ತಿಯಾಗುವ ಬಿದಿರು ಗ್ರಾಮೀಣ ಭಾಗದ ಜನರ ಬದುಕಿಗೆ ಆಧಾರವಾಗಬಲ್ಲ ಸಸ್ಯ.
- ವಾತಾವರಣದ ಮಲಿನ ಗಾಳಿಯನ್ನು ಹೀರುವ ಸಾಮರ್ಥ್ಯ ಉಳಿದ ಸಸ್ಯಗಳಿಗಿಂತ ನಾಲ್ಕು ಪಟ್ಟು ಹೆಚ್ಚು ಬಿದಿರಿಗಿದೆ. ಅದರಂತೆ ಹೆಚ್ಚಿನ ಜೀವವಾಯು ಆಮ್ಲಜನಕವನ್ನು ನೀಡುವ ಕ್ಷಮತೆ ಕೂಡ ಬಿದಿರಿಗೆ ಇದೆ. ಮಣ್ಣಿನ ಸವಕಳಿ, ಭೂಕುಸಿತ ತಡೆಗಟ್ಟುವುದು, ಮಣ್ಣಿನ ಫಲವತ್ತತೆ ಮತ್ತು ಅಂತರ್ಜಲ ಹೆಚ್ಚಿಸುವ ಬಿದಿರಿನ ಗುಣ ಮಹತ್ತರವಾದದ್ದು.

–ಡಾ. ಶ್ರೀಕಾಂತ ಗುನಗಾ
ಇಂಡಸ್–ಟ್ರೀ ಫೌಂಡೇಷನ್‌ನ ಹಿರಿಯ ಸಸ್ಯವಿಜ್ಞಾನಿ



ಬಿದಿರು ಬೆಳೆಯೊಂದಿಗೆ ಸುಶೀಲಾ

ಹಾಗೂ ಚಿಕ್ಕಮಗಳೂರಿನಲ್ಲೂ ಬಿದಿರು ಬೇಸಾಯಕ್ಕೆ ಉತ್ತೇಜನ ನೀಡಲಾಗುತ್ತಿದೆ. ರಾಜ್ಯದ ಸಣ್ಣ ಹಿಡುವಳಿದಾರರು 'ಲಕಪತಿ ದೀದಿ' ಯೋಜನೆಯಲ್ಲಿ ಪಾಲ್ಗೊಂಡು ಯೋಜನೆಯ ಪ್ರಯೋಜನವನ್ನು ಪಡೆದುಕೊಳ್ಳಬಹುದು ಎಂದು ಇಂಡಸ್–ಟ್ರೀ ಫೌಂಡೇಷನ್‌ನ ಹಿರಿಯ ಸಸ್ಯವಿಜ್ಞಾನಿ ಡಾ. ಶ್ರೀಕಾಂತ ಗುನಗಾ ಅವರು ಮಾಹಿತಿ ನೀಡಿದ್ದಾರೆ.

'ಭಾರತದಲ್ಲಿ ಬಿದಿರಿನ ಬಳಕೆ ದಿನೇ ದಿನೇ ಹೆಚ್ಚಾಗುತ್ತಿದೆ. ಪ್ಲಾಸ್ಟಿಕ್ ಉತ್ಪನ್ನಗಳಿಗೆ ಪರ್ಯಾಯವಾಗಿ ಬಿದಿರನ್ನು ಬಳಕೆ ಮಾಡಲಾಗುತ್ತಿದೆ. ಆಧುನಿಕ ಉದ್ಯಮ ವಲಯಗಳಾದ ವಸತಿ ಮತ್ತು ರಚನೆಗಳು, ಲ್ಯಾಮಿನೇಟ್‌ಗಳು ಮತ್ತು ಸಂಯೋಜನೆಗಳು, ಒಳಾಂಗಣ ಅಲಂಕಾರ, ನೆಲಹಾಸು, ಅಗರಬತ್ತಿ ಉದ್ಯಮ, ಪೀಠೋಪಕರಣಗಳು ಮತ್ತು ಗೃಹೋಪಯೋಗಿ ವಸ್ತುಗಳು, ಸಕ್ರಿಯ ಇದ್ದಿಲು, ಬಯೋಚಾರ್, ಜೈವಿಕ ಇಂಧನ, ಜವಳಿ, ಬಟ್ಟೆಗಳು, ನೂಲು ಮತ್ತು ಬಿದಿರಿನ ಫೈಬರ್‌ಗಳ ತಯಾರಿಕೆಯಲ್ಲಿ ಬಿದಿರು ತನ್ನ ಛಾಪನ್ನು ಮೂಡಿಸುತ್ತಿದೆ. ಇಂಧನ ಸಂಪನ್ಮೂಲಗಳಿಗೆ, ಫ್ಯಾಷನ್ ಅನ್ವಯಿಕೆಗಳಿಗೆ ಭಾರತವು 2030ರ ವೇಳೆಗೆ ದೇಶೀಯ ಬಳಕೆಗಾಗಿ ಅಂದಾಜು ₹10000 ಕೋಟಿ ಮೌಲ್ಯದ ಕಚ್ಚಾ ಬಿದಿರನ್ನು ಆಮದು ಮಾಡಿಕೊಳ್ಳುವ ನಿರೀಕ್ಷೆಯಿದೆ. ಆದರೆ ಜಾಗತಿಕ ಮಟ್ಟದಲ್ಲಿ ಹೋಲಿಕೆ ಮಾಡಿದರೆ ಬಿದಿರಿನ ಉತ್ಪಾದನೆಯಲ್ಲಿ ಭಾರತದ ಪಾಲು ಶೂನ್ಯ' ಎಂದು ಶ್ರೀಕಾಂತ ಗುನಗಾ ಹೇಳುತ್ತಾರೆ.

'ದೊಡ್ಡ ಹಿಡುವಳಿದಾರರು ಸ್ವಯಂಪ್ರೇರಿತರಾಗಿ ಸ್ವಂತ ಜಮೀನುಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಬಿದಿರು ಬೆಳೆಯಲು ರಾಷ್ಟ್ರೀಯ ಬಿದಿರು ಮಿಷನ್ ಅಡಿಯಲ್ಲಿ ಸಹಾಯ ಪಡೆಯಬಹುದು. ಅಂತರರಾಷ್ಟ್ರೀಯ ಮಟ್ಟದಲ್ಲಿ ಬಿದಿರಿನ ಉದ್ಯಮಗಳಿಗೆ ಪ್ರಮಾಣೀಕೃತ ಬಿದಿರಿನ ಅವಶ್ಯಕತೆಯಿರುವುದರಿಂದ, ಸುಸ್ಥಿರ ಬಿದಿರಿನ ತೋಪುಗಳಿಗೆ ನೀಡಲಾಗುವ ಪ್ರಮಾಣಪತ್ರವೂ ಲಭಿಸಲಿದೆ. ರೈತರು ಬೆಳೆದ ಬಿದಿರಿಗೆ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಬಿದಿರು ಉದ್ಯಮಗಳಿಗೆ ಬೇಡಿಕೆ, ಬೆಲೆ ಅಧಿಕವಾಗುವ ವಿಪುಲ ಅವಕಾಶಗಳಿವೆ. ಪ್ರಸ್ತುತ ಮಹಿಳಾ ಸಬಲೀಕರಣಕ್ಕಾಗಿ ಬಿದಿರು ಕೃಷಿ ಉತ್ತೇಜಿಸಲು ಒಬ್ಬ ಮಹಿಳೆಗೆ 60 ಬಿದಿರು ಸಸಿ ಹಾಗೂ ಗೊಬ್ಬರವನ್ನು ಉಚಿತವಾಗಿ ನೀಡಲಾಗುತ್ತಿದೆ' ಎನ್ನುತ್ತಾರೆ ಅವರು.

'ಗುಡ್ಡದ ಇಳಿಜಾರು, ಜೌಗು ಪ್ರದೇಶ ಹಾಗೂ ಕಲ್ಲುಬಂಡೆಯಿಂದ ಕೂಡಿದ ಜಾಗವನ್ನು ಹೊರತುಪಡಿಸಿ ಬಿದಿರನ್ನು ಉಳಿದೆಲ್ಲ ಪ್ರದೇಶಗಳಲ್ಲಿ ಬಹು ಸುಲಭವಾಗಿ ಬೆಳೆಯಬಹುದು. ಜಮೀನಿನ ಇಕ್ಕೆಲಗಳಲ್ಲಿ, ಹಾದಿ ಬದಿಯಲ್ಲೂ ಖರ್ಚಿಲ್ಲದೆ ಆದಾಯ ತಂದುಕೊಡಬಲ್ಲ ಕೃಷಿಯಿದು. ಒಂದು ಎಕರೆಗೆ ಸುಮಾರು 200 ಸಸಿಗಳನ್ನು 15 ಅಡಿ ಅಂತರದಲ್ಲಿ ನಾಟಿ ಮಾಡಬಹುದು. ಮೂರು ವರ್ಷಗಳವರೆಗೆ ಬೇಸಿಗೆಯಲ್ಲಿ ವಾರಕ್ಕೆ ಎರಡು ಬಾರಿ ನೀರುಣಿಸಿದರೆ ಸಾಕು. ಒಮ್ಮೆ ಬಿದಿರು ಬೆಳೆದರೆ ನಂತರ ಕನಿಷ್ಠ ಆರೈಕೆ ಮಾಡಿದರೆ ಸಾಕು. ವಾತಾವರಣ ಬದಲಾವಣೆಯ ಹಂಗಿಲ್ಲ, ಹಣ್ಣು ಬಿಡಬೇಕೆಂಬ ಪ್ರಮೇಯವಿಲ್ಲ, ಕಾಡುಪ್ರಾಣಿ, ಮಂಗ, ಕಳ್ಳಕಾಕರ ಭಯವಿಲ್ಲ. ನಿರ್ವಹಣಾ ವೆಚ್ಚದ ಚಿಂತೆ ಇಲ್ಲದೇ ನಾಟಿ ಮಾಡಿದ 4 ವರ್ಷದಿಂದ ವಾರ್ಷಿಕವಾಗಿ ₹1.5 ರಿಂದ ₹2 ಲಕ್ಷದವರೆಗೂ ಆದಾಯ ಗಳಿಸಬಹುದು. ಒಮ್ಮೆ ನಾಟಿ ಮಾಡಿದರೆ ಅವು ಹೂವು ಬಿಡುವವರೆಗೂ, ಅಂದರೆ 60 ವರ್ಷಗಳವರೆಗೂ ಆದಾಯ ಪಡೆಯುತ್ತಿರಬಹುದು' ಎನ್ನುತ್ತಾರೆ ಶ್ರೀಕಾಂತ ಗುನಗಾ.

ಪ್ರತಿಕ್ರಿಯಿಸಿ: feedback@sudha.co.in